ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-1.
ದೂ. 080-22372738 e-mail: nrega@karnataka.gov.in

ಸಂಖ್ಯೆ: ಗ್ರಾಅಪ 01(1) ಉಖಾಯೋ 2020 ದಿನಾಂಕ: 08-07-2020

**INTERNSHIP FOR MAINTAINACE OF A WEB-PAGE AND DEVELOPMENT OF CREATIVE CONTENT/VIDEOS FOR MGNREGA, KARNATAKA**

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದಲ್ಲಿ INTERN ಆಗಿ ಕಾರ್ಯನಿರ್ವಹಿಸಲು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಉತ್ತಮ ಜ್ಞಾನ ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. INTERN ಗಳಿಗೆ ಮಾಸಿಕ ರೂ.25000/- ಗೌರವಧನ ನಿಗದಿಪಡಿಸಲಾಗಿ, INTERNSHIP 04 ತಿಂಗಳ ಅವಧಿಯದಾಗಿದ್ದು, ಗರಿಷ್ಠ 02 ತಿಂಗಳ ಅವಧಿಗೆ ವಿಸ್ತರಿಸಬಹುದಾಗಿದೆ.

ಮಹಾತ್ಮಾ ಗಾಂಧಿ ನರೇಗಾ ಯೋಜನೆಯ ವೆಬ್-ಪೇಜ್ ನಿರ್ವಹಿಸುವುದು, ನಿಯಮಿತವಾಗಿ ವಿಡಿಯೋಗಳನ್ನು ದಾಖಲಿಸುವುದು ಮತ್ತು ಎಡಿಟ್ ಮಾಡುವುದು, ಸಾಮಾಜಿಕ ಮಾಧ್ಯಮಗಳನ್ನು ನಿರ್ವಹಿಸುವುದು ಮತ್ತು ಅನುಮೋದನೆ ನೀಡಲಾದ ಸೃಜನಶೀಲ ವಿಷಯಗಳನ್ನು ವೆಬ್ ಪೇಜ್‌ಗೆ ಅಪ್ಲೋಡ್ ಮಾಡುವುದು INTERN ಅವರ ಜವಾಬ್ದಾರಿಯಾಗಿರುತ್ತದೆ. Curriculum Vitae (CVs) ಮತ್ತು ಅನುಭವ ಆಧರಿಸಿ ಅಭ್ಯರ್ಥಿಗಳನ್ನು Short list ಮಾಡಲಾಗುತ್ತದೆ. Curriculum Vitae ಹುದ್ದೆಗೆ ಅಪೇಕ್ಷಣೀಯವಾದ ಎಲ್ಲಾ ಮಾಹಿತಿಯನ್ನು ಒಳಗೊಂಡಿರಬೇಕು.

ಅರ್ಹತೆಗಳು:

1. ಅಭ್ಯರ್ಥಿಯು ಯಾವುದಾದರೂ 03 ಸಂಸ್ಥೆಗಳ ವೆಬ್-ಪೇಜ್ ವಿನ್ಯಾಸ ಮಾಡಿರಬೇಕು ಮತ್ತ ಅವುಗಳು ಪ್ರಸ್ತುತ ಬಳಕೆಯಲ್ಲಿರಬೇಕು. ಈ ವೆಬ್-ಪೇಜ್ ಗಳ ಲಿಂಕ್‌ಗಳನ್ನು Curriculum Vitae ಯಲ್ಲಿ Share ಮಾಡಬೇಕು. (Preferably Interactive web service)
2. ಅಭ್ಯರ್ಥಿಯು ಉತ್ತಮವಾದ ವಿಡಿಯೋ-ಎಡಿಟಿಂಗ್ ತಂತ್ರಾಂಶದ ಜ್ಞಾನ ಹೊಂದಿರಬೇಕು ಮತ್ತು ಕನಿಷ್ಠ 05 ವಿಡಿಯೋಗಳನ್ನು ಅಭಿವೃದ್ಧಿಪಡಿಸಿರಬೇಕು. ಈ ವಿಡಿಯೋಗಳ ಗೂಗಲ್ ಡ್ರೈವ್ ಲಿಂಕ್ ಅನ್ನು Curriculum Vitae ಯಲ್ಲಿ Share ಮಾಡಬೇಕು.
3. ಅಭ್ಯರ್ಥಿಯು ವಿಡಿಯೋ ಪ್ರೋಸೆಸಿಂಗ್ ತಂತ್ರಾಂಶದ ಉತ್ತಮ ಜ್ಞಾನ ಹೊಂದಿರಬೇಕು.
4. ಅಭ್ಯರ್ಥಿಯು ಉತ್ತಮವಾದ ಫೋಟೋ-ಎಡಿಟಿಂಗ್ ಬಗ್ಗೆ ಉತ್ತಮವಾದ ಜ್ಞಾನ ಹೊಂದಿರಬೇಕು ಹಾಗೂ ಫೋಟೋ ಎಡಿಟಿಂಗ್ ತಂತ್ರಾಂಶದ ಬಗ್ಗೆ ತಿಳುವಳಿಕೆ ಇರಬೇಕು. ತಂತ್ರಾಂಶದಲ್ಲಿನ ಎಲ್ಲಾ ಟೂಲ್ ಗಳನ್ನು ಬಳಸಲು ತಿಳಿದಿರಬೇಕು.
5. ತೆಗೆಯಲಾದ ಫೋಟೋ ಹಾಗೂ ವಿಡಿಯೋಗಳ ತಾಂತ್ರಿಕ ಅಂಶಗಳ ಬಗ್ಗೆ ಉತ್ತಮ ತಿಳುವಳಿಕೆ ಇರಬೇಕು. (ಉದಾಹರಣೆಗೆ Different types of file formats)
6. Motion Poster ತಯಾರಿಸುವ ಕುರಿತು ಜ್ಞಾನ ಹೋಂದಿರುವವರಿಗೆ ಆದ್ಯತೆ ನೀಡಲಾಗುವುದು.
7. ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಉತ್ತಮ ಜ್ಞಾನ ಹೊಂದಿರಬೇಕು.

Curriculum Vitae ಗಳನ್ನು ದಿನಾಂಕ-16-07-2020ರ ಸಂಜೆ 5.30ರೊಳಗೆ nrega@karnataka.gov.in ಇ-ಮೇಲ್ ಮಾಡಬೇಕು. ಇ-ಮೇಲ್ ವಿಷಯದಲ್ಲಿ **<INTERNSHIP FOR CREATIVE CONTENT>** ಎಂದು ನಮೂದಿಸಿರಬೇಕು. ಅಗತ್ಯ ವಿವರಗಳನ್ನು ಹೊಂದಿಲ್ಲದೇ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ನಿಗದಿತ ಅವಧಿಯ ನಂತರ ಸಲ್ಲಿಸಲಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. Short list ಮಾಡಲಾದ ಅಭ್ಯರ್ಥಿಗಳನ್ನು ಮಾತ್ರ ತಮ್ಮ ಜ್ಞಾನ ಹಾಗೂ ಅನುಭವವನ್ನು ಪ್ರಸ್ತುತಪಡಿಸಲು ಆಹ್ವಾನಿಸಲಾಗುವುದು ಮತ್ತು ಸೂಕ್ತ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು.

ಆಯುಕ್ತರು, ಗ್ರಾಮೀಣಾಭಿವೃದ್ಧಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ